

**ರಕ್ಷಿತ್ ಅರಸ್ ಗೋಪಾಲ್ ಸ್ಟಾರ್ ಸುವರ್ಣದ 'ಮತ್ತೆ ವಸಂತ'ದ ವಸಂತ**

# ಸಂಭಾವನೆ ಕೇಳಿದರೆ ಮೊಬೈಲ್ ಸ್ವಿಚ್ ಆಫ್!

◆ **ಟೆಕ್ಕಿ ಆಗಬೇಕಾದವರು ನಟರಾಗಿದ್ದು?**

ನನ್ನೂರು ಮೈಸೂರು. ಅಲ್ಲೇ ಕಂಪ್ಯೂಟರ್ ಸೈನ್ಸ್‌ನಲ್ಲಿ ಡಿಪ್ಲೊಮಾ ಮಾಡಿದೆ. ಬಿಇಗೆ ಹೋಗುವ ತಯಾರಿಯಲ್ಲಿ ಇದ್ದೆ. ಅದಕ್ಕೆ ಒಂದಿಷ್ಟು ಸಮಯ ಇತ್ತು. ಹೊರಗೆ ಸುತ್ತಾಡಲು ಹೋದವನಿಗೆ ರಂಗಭೂಮಿ ನಂಟು ಬೆಳೆಯಿತು. ಮೈಸೂರಿನ 'ನಿರಂತರ' ತಂಡ ಒಂದು ವಾರದ ರಂಗ ಉತ್ಸವವನ್ನು ಏರ್ಪಡಿಸಿತ್ತು. ಅದರಲ್ಲಿ ಜಂಬೆ ಸರ್ 'ಶಿವರಾತ್ರಿ' ನಾಟಕವನ್ನು ಮಾಡಿಸಿದ್ದರು. ನಾನು ಆ ನಾಟಕ ನೋಡಲು ಹೋಗಿದ್ದೆ. ಇದೆಲ್ಲ ಹೇಗೆ ಸಾಧ್ಯ ಎಂದು ತಿಳಿದುಕೊಳ್ಳುವ ಕುತೂಹಲ ಹುಟ್ಟಿತು. 'ನಟನಾ' ರಂಗ ತಂಡದಲ್ಲಿದ್ದ ನನ್ನ ಗೆಳೆಯರೂ ಅಲ್ಲಿಗೆ ಬಂದಿದ್ದರು. ಅವರ ಮೂಲಕ ಮಂಡ್ಯ ರಮೇಶ್ ಅವರ 'ನಟನಾ' ತಂಡದ ಸಂಪರ್ಕ ಬೆಳೆಯಿತು. ಮೇಘಸಮೀರ ತರಬೇತಿ ನೀಡುತ್ತಿದ್ದರು. ಆಗಾಗ ರಮೇಶ್ ಬಂದು ಹೋಗ್ತಾ ಇದ್ದರು. ಆರಂಭದಲ್ಲಿ ನನಗೆ ಯಾವ ಪಾತ್ರವನ್ನೂ ಕೊಡುತ್ತಿರಲಿಲ್ಲ. 'ನಿಮ್ಮ ಆಸಕ್ತಿ – ಶ್ರಮದ ಮೂಲಕ ಮುಂದಿನ ದಾರಿಯನ್ನು ನೀವೇ ನೋಡಿಕೊಳ್ಳಬೇಕು' ಎಂಬ ಸ್ಪಷ್ಟನೆ ಮೂಲಕ ಅಭಿನಯದ ಓಂಕಾರ ಆರಂಭವಾಯಿತು. ಮಾತಿಲ್ಲದೆ ಅಭಿನಯದ ಮೂಲಕವೇ ಕೆಲವೊಂದು ಸಂಗತಿಯನ್ನು ತೋರಿಸುವ ಸವಾಲನ್ನು ನೀಡುತ್ತಿದ್ದರು.

ರಂಗದಲ್ಲಿಯೇ ಏನಾದರೂ ಮಾಡಬೇಕು ಎಂದು ನೀನಾಸಂಗೆ ಹೋದೆ. ಅಲ್ಲಿ ಇನ್ನೂ ಕಲಿಯಬೇಕು ಎಂದು ಪ್ರವೇಶ ಸಿಗಲಿಲ್ಲ. ಅಲ್ಲೇ ನೋಟಿಸ್ ಬೋರ್ಡ್‌ನಲ್ಲಿ ಹುಬ್ಬಳ್ಳಿ ಸಂಸ್ಕೃತಿ ಕಾಲೇಜ್ ಪ್ರವೇಶದ ವಿವರ ಇತ್ತು. ನಟರಾಜ್ ಹೊನ್ನವಳ್ಳಿ ಅದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಅಲ್ಲಿ ನನಗೆ ಒಂದು ವರ್ಷ ತರಬೇತಿ ಸಿಕ್ಕಿತು. ಮೈಮ್, ಯಕ್ಷಗಾನ, ನಾಟಕಗಳನ್ನು ಕಲಿತೆ. ಗಿರೀಶ ಕಾರ್ನಾಡ, ರಘುನಂದನ ನಮಗೆ ಪಾಠ ಹೇಳಿದ್ದಾರೆ.

◆ **ನಿಮ್ಮ ದನಿಯನ್ನು ಏಕೆ ದುಡಿಸಲಿಲ್ಲ?**

ನನ್ನ ದನಿಗೂ ಬೇಡಿಕೆ ಇದೆ ಎನ್ನುವುದು ಗೊತ್ತಾಗಿದ್ದು ನಟನಾದ ಮೇಲೆ. 'ಅವಲೋಕನ' ಕಿರುಚಿತ್ರದಲ್ಲಿ ನಟನೆ ಜೊತೆ ಧ್ವನಿಯನ್ನೂ ನೀಡಿದ್ದೇನೆ. ಹಲವು ಕಿರುಚಿತ್ರಗಳಿಗೆ ಕಂಠದಾನ ಕಲಾವಿದನಾಗಿ ಕೆಲಸ ಮಾಡಿದ್ದೇನೆ. ಸಿನಿಮಾಗಳಿಗೂ ಡಬ್ಬಿಂಗ್ ಮಾಡಿದ್ದೇನೆ. ಅಲ್ಲಿ ಸಂಭಾವನೆ ಸರಿಯಾಗಿ ಇರಲಿಲ್ಲ. ಕೊಡ್ತೀನಿ ಎನ್ನುವ ಭರವಸೆ ನೀಡ್ತಾ ಇದ್ದರು. ನಂತರ ಅವರ ಫೋನ್ ಆಫ್ ಮಾಡ್ತಿದ್ದರು. ಇಲ್ಲವೇ ನನ್ನ ಫೋನ್ ತೆಗೆಯುತ್ತಿರಲಿಲ್ಲ. ಕೆಲವು ಸಿನಿಮಾಗಳಿಗೆ ನಟನಾಗಿಯೂ ದುಡಿದಿದ್ದೇನೆ. ನನ್ನದೇ ಖರ್ಚುವೆಚ್ಚದಲ್ಲಿ ಹೋಗಿ ಬಂದರೂ ಅವರಿಂದ ಸಂಭಾವನೆ ಅಂತ ಒಂದು ರೂಪಾಯಿಯನ್ನೂ ಪಡೆದೇ ಇಲ್ಲ. ಹಾಗಾಗಿ ಕಂಠದಾನ ಕಲಾವಿದನಾಗಿ ಮುಂದುವರಿಯಲಿಲ್ಲ. ಪರಿಚಿತರು ಕೇಳಿದಾಗ ಡಬ್ ಮಾಡುತ್ತೇನೆ.

◆ **ನಿಮ್ಮ ಜೀವನದಲ್ಲಿ ಆದ ಬದಲಾವಣೆ ಬಗ್ಗೆ ಹೇಳುವುದಾದರೆ...**

ರಂಗ ನಟನಾಗಿ ಹೊರಹೊಮ್ಮಿದ ಮೇಲೆ ಒಂದಿಷ್ಟು ದಿನ ಅಭಿನಯ ಮಾಡಿದೆ. ಕಷ್ಟ ಇದ್ದ ಕಾರಣಕ್ಕೆ ನಟನೆಯನ್ನು ಬಿಟ್ಟು ಕೆಲಸಕ್ಕೆ ಸೇರಿಕೊಂಡೆ. ಒಳ್ಳೆಯ ಅವಕಾಶ ಸಿಕ್ಕೇ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದೆ. ಮೈಸೂರಿನಲ್ಲಿ ಮಾರುತಿ ಕಾರಿನ ಬಿಡಿ ಭಾಗಗಳ ಮಾರಾಟ ಪ್ರತಿನಿಧಿಯಾಗಿ ಸುಮಾರು ದಿನ ಕೆಲಸ ಮಾಡಿದೆ. ಅದು ಕೂಡ ನಟನೆಯ ರೂಪ ಎಂದೇ ಭಾವಿಸಿದೆ. ನಮ್ಮ ಕುಟುಂಬದಲ್ಲಿ ನಾನೇ ಬಣ್ಣವನ್ನು ಹಚ್ಚಿದ ಮೊದಲಿಗ. ತಂದೆ ನಟನೆಗೆ ಪ್ರೋತ್ಸಾಹಿಸಿದರೆ, ತಾಯಿ ಅನಿಶ್ಚಿತ ಬದುಕಿನ ಸವಾಲು ಬೇಡ ಎನ್ನುವ ಎಚ್ಚರಿಕೆಯನ್ನು ನೀಡುತ್ತಿದ್ದರು.

ತೆರೆ ಕಂಡ ನಂತರ ಜನ ಗುರುತಿಸುತ್ತಾರೆ, ಬಂದು ಮಾತನಾಡಿಸುತ್ತಾರೆ. ಸೆಲ್ಫಿ ತೆಗೆಸಿಕೊಳ್ಳುತ್ತಾರೆ. ಶಾಲಾ ಕಾಲೇಜುಗಳ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕರೆಯುತ್ತಾರೆ. ಅದೆಲ್ಲ ನನಗೆ ನಟನೆಯಿಂದ ಲಭಿಸಿದ ಭಾಗ್ಯ. ಸಿನಿಮಾ ಮತ್ತು ಕಿರುತೆರೆ ರಂಗಭೂಮಿಯ ಹಾಗಿರಲಿಲ್ಲ. ಇಲ್ಲಿ ಬಂದ ನಂತರ ಕ್ಯಾಮೆರಾ ಎದುರಿಸುವುದು ಕಲಿತೆ. ಸೀರಿಯಲ್ ಸಂಭಾವನೆ ಜೊತೆ ನಿರಂತರ ಪಾಠವನ್ನೂ ಕಲಿಸಿಕೊಡುತ್ತದೆ.

◆ **ನಿಮ್ಮ ಬಣ್ಣದ ಲೋಕದ ಪಯಣವನ್ನು ಹೇಳಿ**

ರಂಗ ತರಬೇತಿ ನಂತರ ಬೆಂಗಳೂರಿಗೆ ಬಂದು ನಟನೆಯ ಹುಡುಕಾಟದಲ್ಲಿ ತೊಡಗಿದೆ. ವಾಟ್ಸ್ ಆ್ಯಪ್ ಸಂದೇಶಗಳನ್ನು ಫಾಲೋ ಮಾಡ್ತಾ ಇದ್ದೆ. 50–60 ಆಡಿಷನ್ ನೀಡಿದೆ. ಮೊದಲ ಅವಕಾಶ 'ಮಹಾದೇವಿ'ಯಲ್ಲಿ ಸಹನಟನಾಗಿ ಮಾಡಿದೆ. ಮೈಸೂರಿಗೆ ಹೋಗಿ ಹದಿನೆಂಟು ತಿಂಗಳು ಕೆಲಸ ಮಾಡಿದೆ. 'ಮಾಂಗಲ್ಯಂ ತಂತು ನಾನೇನ'ದಲ್ಲಿ ಪ್ರಮುಖ ಪಾತ್ರಕ್ಕೆ ಅವಕಾಶ ಸಿಕ್ಕಿತು. ಅಷ್ಟರಲ್ಲಿ ಸ್ಟಾರ್ ಸುವರ್ಣದಲ್ಲಿ 'ಯಜಮಾನಿ'ಯಲ್ಲಿ ನಟಿಸಲು ಅವಕಾಶ ಸಿಕ್ಕಿತು. ಕೋವಿಡ್ ನಂತರ ಈ ಎರಡೂ ಧಾರಾವಾಹಿಗಳು ನಿಂತವು. ಕೋವಿಡ್ ಬಿಡುವಿನ ವೇಳೆಯನ್ನು ಚೆನ್ನಾಗಿ ಬಳಸಿಕೊಳ್ಳಬೇಕು ಎಂದು ವರ್ಕೌಟ್ ಮಾಡಿದೆ. ಆನ್‌ಲೈನ್‌ನಲ್ಲಿ ಆಡಿಷನ್ ನೀಡ್ತಾ ಇದ್ದೆ. ಅದೇ ಹೊತ್ತಿಗೆ 'ಮತ್ತೆ ವಸಂತ'ದಲ್ಲಿ ಲೀಡ್ ಪಾತ್ರ ಒಲಿದುಬಂತು. ಸಿನಿಮಾಕ್ಕೂ ಕರೀತಾರೆ. ಮಾತುಕತೆ ನಡೆಯುತ್ತಿರುತ್ತವೆ.

■ **ರಾಘವೇಂದ್ರ ಕೆ.**